# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ/2022-23

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 26.07.2022

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 20.07.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 26.07.2022

******

ದಿನಾಂಕ 20.07.2022 ರಂದು ಬೆಳಗ್ಗೆ 11.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ(Special)/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 21-07-2022

**ದಿನಾಂಕ 20-07-2022 ರಂದು ಬೆಳಗ್ಗೆ 11.30 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.**

ಹಾಜರಾದ ಸದಸ್ಯರು:

| | | | |
|---|---|---|---|
| 1. | ಪ್ರೊ. ಡಾ. ಜಯಕರ ಎಸ್ ಎಂ<br>ಕುಲಪತಿಗಳು | - | ಸಭಾಧ್ಯಕ್ಷರು |
| 2. | ಡಾ. ಸಿಂಥಿಯಾ ಮಿನೇಜಸ್ | - | ಸದಸ್ಯರು |
| 3. | ಡಾ. ಸುಧಾಕರ್. ಎಚ್ | - | ಸದಸ್ಯರು |
| 4. | ಶ್ರೀ ಎಂ. ಉದಯಕುಮಾರ್ | - | ಸದಸ್ಯರು |
| 5. | ಡಾ. ಧನಂಜಯ ಬಿ.ಆರ್ | - | ಸದಸ್ಯರು |
| 6. | ಡಾ. ಎಂ. ಶೈಲಜ | - | ಸದಸ್ಯರು |
| 7. | ಡಾ. ಸುಧೀರ್ ಪೈ. ಕೆ.ಎಲ್ | - | ಸದಸ್ಯರು |
| 8. | ಡಾ. ಗೋವಿಂದರಾಜು | - | ಸದಸ್ಯರು |
| 9. | ಶ್ರೀ ಗೋಪಿನಾಥ | - | ಸದಸ್ಯರು |
| 10. | ಶ್ರೀ ಪ್ರೇಮ್ ಸೋಹನ್‌ಲಾಲ್ | - | ಸದಸ್ಯರು |
| 11. | ಪ್ರೊ. ಟಿ.ವಿ. ರಾಜು | - | ಸದಸ್ಯರು |
| 12. | ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ | - | ಸದಸ್ಯರು |
| 13. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 14. | ಪ್ರೊ. ಎಂ ಕೊಟ್ರೇಶ್<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ತುರ್ತಾಗಿ ಈ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆದಿರುವ ಉದ್ದೇಶವನ್ನು ವಿವರಿಸಿ ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 18.07.2022 ರಂದು ಹಾಗೂ ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಉನ್ನತಾಧಿಕಾರಿಗಳೊಂದಿಗೆ ದಿನಾಂಕ 19.07.2022 ರಂದು ನಡೆದ ಸಭೆಯ ಕುರಿತು ಸಿಂಡಿಕೇಟ್ ಸಭೆಗೆ ಮಾಹಿತಿ ನೀಡಿ 75ನೇ ಸ್ವಾತಂತ್ರ್ಯೋತ್ಸವ ಆಚರಣೆ ಸಂಬಂಧ ಕರ್ನಾಟಕ ಸರ್ಕಾರವು ರಾಮನಗರದಲ್ಲಿ ಆಜಾದ್ ಕಿ ಅಮೃತ ಮಹೋತ್ಸವ

ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸುವ ಸಂಬಂಧ ಬೆಂಗಳೂರು ವಿಶ್ವವಿದ್ಯಾಲಯವು ಸಮಾರಂಭವನ್ನು ಆಯೋಜಿಸಬೇಕೆಂದು ಸರ್ಕಾರ ನಿರ್ದೇಶಿಸಿದೆ. ಆದಕಾರಣ, ಆಡಳಿತಾತ್ಮಕ ಅನುಮೋದನೆ ಪಡೆಯಲು ಸಿಂಡಿಕೇಟ್ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂದು ಕುಲಪತಿಗಳನ್ನು ಕೋರಿದರು.

ಕುಲಪತಿಗಳು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು. ಅವರು ಮಾತನಾಡಿ ಆಜಾದ್ ಕಿ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸುವ ಸಂಬಂಧ ವಿಶ್ವವಿದ್ಯಾಲಯವು ರಾಮನಗರದಲ್ಲಿ ಕಾರ್ಯಕ್ರಮವನ್ನು ನಡೆಸಬೇಕೆಂದು ಕರ್ನಾಟಕ ಸರ್ಕಾರ ಸೂಚಿಸಿದೆ. ಈ ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಸನ್ಮಾನ್ಯ ವಿದೇಶಾಂಗ ಸಚಿವರು ಭಾಗವಹಿಸಲಿದ್ದಾರೆ. ಸದರಿ ಕಾರ್ಯಕ್ರಮದ ಖರ್ಚು ವೆಚ್ಚಗಳನ್ನು ವಿಶ್ವವಿದ್ಯಾಲಯ ಭರಿಸಬೇಕೆಂದು ಸರ್ಕಾರ ಸೂಚಿಸಿದೆ. ಈ ಕಾರ್ಯಕ್ರಮವನ್ನು ದಿನಾಂಕ 22.07.2022 ರಂದು ಆಯೋಜಿಸಲು ಸರ್ಕಾರ ಉದ್ದೇಶಿಸಿತ್ತು. ಆದರೆ ಅನಿವಾರ್ಯ ಕಾರಣದಿಂದ ಸದರಿ ಕಾರ್ಯಕ್ರಮದ ದಿನಾಂಕವನ್ನು ಮುಂದೂಡಿದ್ದು, ಸಧ್ಯದಲ್ಲೇ ಕರ್ನಾಟಕ ಸರ್ಕಾರ ಕಾರ್ಯಕ್ರಮವನ್ನು ಜರುಗಿಸುವ ದಿನಾಂಕವನ್ನು ತಿಳಿಸಲಿದೆ.

ಡಾ. ಹೆಚ್. ಸುಧಾಕರ್ ರವರು ಮಾತನಾಡಿ ಮೇಲ್ಕಂಡ ಕಾರ್ಯಕ್ರಮವು ವಿಶ್ವವಿದ್ಯಾಲಯದ ಕಾರ್ಯಕ್ರಮವೇ ಅಥವಾ ಸರ್ಕಾರದ ಪರವಾಗಿ ಬೆಂಗಳೂರು ವಿಶ್ವವಿದ್ಯಾಲಯವು ಮಾಡುತ್ತಿರುವ ಕಾರ್ಯಕ್ರಮವೇ ಎಂಬುದನ್ನು ಸ್ಪಷ್ಟಪಡಿಸಬೇಕು. ಸರ್ಕಾರದ ಕಾರ್ಯಕ್ರಮವಾದರೆ ಅಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ರಾಜಕೀಯ ಧುರೀಣರು ವೇದಿಕೆ ಮೇಲೆ ಇರುತ್ತಾರೆ. ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಜಾಗವಿರುವುದಿಲ್ಲ. ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ Logo ಬರಬೇಕು, ನಮ್ಮ ವಿಶ್ವವಿದ್ಯಾಲಯದ ಕೋರ್ಸುಗಳ ಬಗ್ಗೆ ಒಂದು ವಿಡಿಯೋ ಚಿತ್ರೀಕರಣವನ್ನು ಸಮಾರಂಭದಲ್ಲಿ ಪ್ರದರ್ಶಿಸಬೇಕು. ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ವತಿಯಿಂದ ನೀಡಬೇಕು, ಪ್ರಸಾರಾಂಗ ಪ್ರಕಟಣೆಗಳ ಮಾರಾಟ ಮಳಿಗೆಯನ್ನು ತೆರೆಯಬೇಕೆಂದು ಸಲಹೆ ನೀಡಿದರು.

ಶ್ರೀ ಪ್ರೇಮ್ ಸೋಹನ್‌ಲಾಲ್ ಅವರು ಮಾತನಾಡಿ ಅಜಾದ್ ಕಿ ಅಮೃತ ಮಹೋತ್ಸವದ ಅಂಗವಾಗಿ ವಿಶ್ವವಿದ್ಯಾಲಯವು ರಾಮನಗರದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆ. ಈ ಸದರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯ ಮಟ್ಟದ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ರಾಮನಗರ ಭಾಗದ ವಿದ್ಯಾರ್ಥಿಗಳು, ಅಂತರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಸಾಧನೆಗೈದ ಕ್ರೀಡಾಪಟುಗಳಿಗೆ, ಸನ್ಮಾನ ಸ್ವಾತಂತ್ರ್ಯೋತ್ಸವದಲ್ಲಿ ರಾಮನಗರ ಜಿಲ್ಲೆಯ ಕೊಡುಗೆ ಇವುಗಳನ್ನೊಳಗೊಂಡ ಚಿತ್ರಣವನ್ನು ಪ್ರದರ್ಶಿಸಬೇಕು ಸರ್ಕಾರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕಾರ್ಯಕ್ರಮಗಳು ಒಗ್ಗೂಡುವಿಕೆಯಾಗಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಈಗಾಗಲೆ ಒಂದು ಸಭೆ ನಡೆದಿದ್ದು, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಚರ್ಚೆ ನಡೆದಿದ್ದು, ರಾಮನಗರದಲ್ಲಿ ಆಯೋಜಿಸುವ ಸರ್ಕಾರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದಿಂದ ಪ್ರತಿಭಾನ್ವಿತರಿಗೆ ಸನ್ಮಾನ, ವಿಶ್ವವಿದ್ಯಾಲಯ ಪ್ರಸಾರಾಂಗ ವಿಭಾಗದಲ್ಲಿ ಪ್ರಕಟವಾದ ಒಳ್ಳೆಯ ಪುಸ್ತಕಗಳನ್ನು ಹಾಗೂ ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ನಡೆಸುವ ಕೋರ್ಸುಗಳ ವಿವರಗಳನ್ನು ಪ್ರದರ್ಶಿಸಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಗಮನಕ್ಕೆ ತರಲು ಒಂದು ಸ್ಟಾಲ್ (Stall) ಹಾಕಲು, ಹಾಗೂ ಕೋರ್ಸುಗಳ ವಿವರಗಳನ್ನೊಳಗೊಂಡ ಜಾಹಿರಾತನ್ನೊಳಗೊಂಡ ಫ್ಲೆಕ್ಸ್ ಅನ್ನು ಹದಿನೈದು ಕಡೆ ಹಾಕಿದರೆ ಪಿ.ಯು.ಸಿ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ ಕಾಲೇಜುಗಳು ಹಾಗೂ ಕೋರ್ಸುಗಳ ಬಗ್ಗೆ ಮಾಹಿತಿ ನೀಡಿದಂತಾಗುತ್ತದೆ. ನಮ್ಮ ವಿಶ್ವವಿದ್ಯಾಲಯದ ವತಿಯಿಂದ ಶ್ರೀ ವಿಜಯಪ್ರಕಾಶ್, ಖ್ಯಾತ ಗಾಯಕರು ಇವರಿಂದ ನಾಡಗೀತೆ ಹಾಗೂ ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗದಿಂದ ಒಂದು ಕಾರ್ಯಕ್ರಮ ನೀಡಬೇಕೆಂದು ಸಹ ಸದರಿ ಸಭೆಯಲ್ಲಿ ಸಲಹೆ ವ್ಯಕ್ತವಾಯಿತೆಂದು ತಿಳಸಿದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ;

1. ರಾಷ್ಟ್ರ ತಂಡದಿಂದ ಒಂದು ಕಾರ್ಯಕ್ರಮ
2. ರಾಮನಗರ ಭಾಗದ ವಿದ್ಯಾರ್ಥಿಗಳನ್ನು ಕರೆಯಿಸಿ ಸನ್ಮಾನ ಮಾಡುವುದು
3. ಇಲ್ಲಿಯವರೆಗೂ ಗುರುತಿಸದ ನಾಯಕರು / ಸಾಧಕರನ್ನು ಸನ್ಮಾನಿಸುವುದು
4. ಪ್ರತಿ ಸ್ನಾತಕೋತ್ತರ ವಿಭಾಗಗಳಿಂದ ಒಂದು ಬ್ಯಾನರ್ ಅಥವಾ ಸ್ಟಾಲ್ (Stall) ಗಳನ್ನು ಹಾಗೂ ರಾಮನಗರ ಕಾಲೇಜುಗಳಿಂದ ಒಂದು ಸ್ಟಾಲ್ ನಿರ್ಮಿಸುವುದು
5. ಕನಿಷ್ಠ 20 ಕಾರ್ಪೋರೇಟ್ ಸಂಸ್ಥೆಗಳನ್ನು ಕರೆಸಿ ನಮ್ಮ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶ ನೀಡುವಂತೆ ಕೋರುವುದು
6. ಸರ್ಕಾರಿ ಕಾಲೇಜುಗಳ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಸಲಹೆ ನೀಡಿದರು.

ಡಾ. ಶೈಲಜ.ಎಂ ಹಾಗೂ ಡಾ. ಸುಧೀರ್ ಪೈ ಅವರು ಮಾತನಾಡಿ ಸದರಿ ಕಾರ್ಯಕ್ರಮಕ್ಕೆ ಎನ್.ಎಸ್.ಎಸ್ ವಿದ್ಯಾರ್ಥಿಗಳ ತಂಡಗಳನ್ನು ಉಪಯೋಗಿಸಬಹುದು. ಭೂಸೇನೆ, ವಾಯು ಸೇನೆ ಹಾಗೂ ನೌಕಾದಳದಲ್ಲಿ ಕೆಲಸ ನಿರ್ವಹಿಸಿರುವ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಸನ್ಮಾನಿಸಬಹುದೆಂದರು. ಕುಲಪತಿಗಳು ಮಾತನಾಡಿ ಸ್ವಾತಂತ್ರ್ಯೋತ್ಸವದಂದು ಸದರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಉದಯಕುಮಾರ್.ಎಂ ಅವರು ಮಾತನಾಡಿ ವಿಶ್ವವಿದ್ಯಾಲಯವು ಕಾರ್ಯಕ್ರಮದ ವೆಚ್ಚವನ್ನು ಭರಿಸುವುದರಿಂದ ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳು ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಪಾತ್ರವೇನು ಎಂಬುದನ್ನು ಸೂಚಿಸಬಹುದಾಗಿದೆಯೆಂದು ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ ರಾಮನಗರದಲ್ಲಿ ಆಯೋಜಿಸಬೇಕೆಂದಿರುವ ಕಾರ್ಯಕ್ರಮವು ವಿಶ್ವವಿದ್ಯಾಲಯದ ಕಾರ್ಯಕ್ರಮವಾಗಿ ಉಳಿದುಕೊಳ್ಳಬೇಕು. ಅದರಲ್ಲಿ ರಾಜಕೀಯ ಬೆರೆಯಬಾರದು. ರಾಮನಗರ ಜನತೆಯ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುವಂತೆ ಯಶಸ್ವಿವಾಗಿ ಕಾರ್ಯಕ್ರಮವನ್ನು ರೂಪಿಸಬೇಕು. ರಾಮನಗರ ಜಿಲ್ಲೆಯಲ್ಲಿ ಹುಟ್ಟಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸುವ ಜೊತೆಗೆ, ಸಂಯೋಜಿತ ಕಾಲೇಜುಗಳನ್ನು ಒಳಗೂಡಿಸಿಕೊಂಡು ಕಾರ್ಯಕ್ರಮಗಳನ್ನು ರೂಪಿಸಬೇಕು, ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು ಭಾಗವಹಿಸಬೇಕು, ವಿಶ್ವವಿದ್ಯಾಲಯದ ವತಿಯಿಂದ ವೆಚ್ಚವನ್ನು ಭರಿಸಬೇಕೆಂದು ಮತ್ತು ಕಾರ್ಯಕ್ರಮವನ್ನು ಎಲ್ಲಿ ಆಯೋಜಿಸಬೇಕೆಂಬುದರ ಬಗ್ಗೆ ಒಂದು ಸಮಿತಿಯನ್ನು ಮಾಡಬಹುದೆಂದು ತಿಳಿಸಿದರು.

ಡಾ. ಗೋವಿಂದರಾಜು ಅವರು ಮಾತನಾಡಿ ಇದು ಸರ್ಕಾರದ ಕಾರ್ಯಕ್ರಮವಾಗಿರುವುದರಿಂದ ವಿಶ್ವವಿದ್ಯಾಲಯದ ಹಿಡಿತಕ್ಕೆ ಬರುವುದು ಕಷ್ಟ; ಆದ್ದರಿಂದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಬ್ರಾಂಡ್ (Brand) ಅನ್ನು ಹೆಚ್ಚಿಸಲು ಸಾಧ್ಯವಾದಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯಕ್ರಮವು ನಡೆಯುವುದಾದರೆ ಕಾರ್ಯಕ್ರಮವನ್ನು ರೂಪಿಸುವುದು ಹೇಗೆ, ರಾಜಕೀಯ ಧುರೀಣರು ಒಳಗೊಂಡರೆ ನಮ್ಮ ನಿರೀಕ್ಷೆ ತಪ್ಪಾಗಬಹುದು. ಸರ್ಕಾರಿ ಕಾರ್ಯಕ್ರಮವಾದರೂ ವಿಶ್ವವಿದ್ಯಾಲಯದ ಬ್ರಾಂಡ್ (Brand) ಹೆಚ್ಚಿಸಲು ಅವಕಾಶವಿದೆ. 75ನೇ ವರ್ಷದ ಸಂಭ್ರಮ ಉಳಿಯಬೇಕಾದರೆ, ವಿಶ್ವವಿದ್ಯಾಲಯದ ಅಭ್ಯುದಯಕ್ಕೆ ಯೋಜನೆ ಹಾಕಿಕೊಂಡು, ಶೈಕ್ಷಣಿಕ/ಸಂಶೋಧನಾ ವಿಷಯದಲ್ಲಿ ಹೆಚ್ಚಿನ ಸಾಧನೆಗೈದ ವಿಶ್ವವಿದ್ಯಾಲಯದ ಒಂದು ಅಧ್ಯಯನ ವಿಭಾಗವನ್ನು ಗುರುತಿಸಿ ರೂ. 25.00 ಲಕ್ಷಗಳನ್ನು ಬಹುಮಾನವಾಗಿ ನೀಡಬಹುದು. ಅದಲ್ಲದೆ ಪ್ರತಿಯೊಂದು ನಿಕಾಯದಲ್ಲಿ ಒಂದು ವಿಭಾಗವನ್ನು ಗುರುತಿಸಿ ತಲಾ ರೂ. 12.50 ಲಕ್ಷ ರೂಗಳನ್ನು ಅಭಿವೃದ್ಧಿಗೆ ನೀಡಬಹುದಾಗಿದೆ. ಬೆಂಗಳೂರು ವಿಶ್ವವಿದ್ಯಾಲಯವನ್ನು ಬೆಳೆಸಲು ಕಾರಣಕರ್ತರಾದ ಡಾ. ಹೆಚ್.ಎನ್. ನರಸಿಂಹಯ್ಯ ಅವರ ಹೆಸರಿನಲ್ಲಿ ಸಂಶೋಧನೆಯಲ್ಲಿ ಒಳ್ಳೆಯ ಹೆಸರು ಗಳಿಸಿದ ಒಬ್ಬ ಶಿಕ್ಷಕರು, ಒಬ್ಬ ಸಂಶೋಧನಾ ವಿದ್ಯಾರ್ಥಿ ಹಾಗೂ ಒಬ್ಬ ಸ್ನಾತಕೋತ್ತರ ವಿದ್ಯಾರ್ಥಿಯನ್ನು ಗುರುತಿಸಿ ಅನುಕ್ರಮವಾಗಿ ರೂ. 2.00 ಲಕ್ಷ, ರೂ. 1.00 ಲಕ್ಷ ಹಾಗೂ ರೂ. 50,000/- ಗಳನ್ನು ಬಹುಮಾನವಾಗಿ ಮಂಜೂರು ಮಾಡಬಹುದಾಗಿದೆ. ವಿದ್ಯಾಸ್ಫೂರ್ತಿ ಯೋಜನೆ ಅಡಿಯಲ್ಲಿ ಸ್ನಾತಕ ಪದವಿಯನ್ನು ಪ್ರಥಮ ಮತ್ತು ದ್ವಿತೀಯ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ ಶಿಕ್ಷಣ ನೀಡಬಹುದಾಗಿದೆ. ಅನಾಥ ಮಕ್ಕಳು, ಹಾಗೂ Single Girl Child ಕಡುಬಡವರಾದ 20 ವಿದ್ಯಾರ್ಥಿಗಳಿಗೆ ಉಚಿತ ಸ್ನಾತಕೋತ್ತರ ಶಿಕ್ಷಣ ನೀಡಲು ವಿಶ್ವವಿದ್ಯಾಲಯ ಕ್ರಮ ತೆಗೆದುಕೊಳ್ಳಬಹುದಾಗಿದೆ. ಅದಲ್ಲದೆ ಅತ್ಯುತ್ತಮ ಶಿಕ್ಷಕೇತರ ಸಿಬ್ಬಂಧಿಯನ್ನು ಸನ್ಮಾನಿಸಬಹುದಾಗಿದೆ ಎಂದರು.

ಡಾ. ಸಿಂಥಿಯಾ ಮಿನೇಜಸ್ ಅವರು ಮಾತನಾಡಿ Freedom Struggle ಬಗ್ಗೆ ಒಂದು ನಾಟಕ ಪ್ರದರ್ಶನ ಮಾಡಿಸಬಹುದಾಗಿದೆಯೆಂದರು. ಡಾ. ಧನಂಜಯ ಅವರು ಮಾತನಾಡಿ ಸದರಿ ಕಾರ್ಯಕ್ರಮದಲ್ಲಿ

ಸಮಯ ನೀಡಿದರೆ ವಿಶ್ವವಿದ್ಯಾಲಯದ ಸಾಧನೆ ಬಗ್ಗೆ ಬೆಳಕು ಚೆಲ್ಲುವ 05 ನಿಮಿಷದ ಕಾರ್ಯಕ್ರಮ ಹಾಗೂ ಸಾಧಕರಿಗೆ ಸನ್ಮಾನ ಮಾಡಬಹುದಾಗಿದೆ ಎಂದರು.

ಕುಲಪತಿಗಳು ಮಾತನಾಡಿ ಸದಸ್ಯರೆಲ್ಲರೂ ಒಳ್ಳೆಯ ಸಲಹೆ ನೀಡಿದ್ದೀರಿ, ರಾಮನಗರದಲ್ಲಿ ಆಯೋಜಿಸುವ ಈ ಕಾರ್ಯಕ್ರಮವನ್ನು ಆದಷ್ಟು ವಿಶ್ವವಿದ್ಯಾಲಯದ ಕಾರ್ಯಕ್ರಮವಾಗಿ ರೂಪಿಸುವ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಲಾಗುವುದೆಂದರು.

ದೀರ್ಘ ಚರ್ಚೆಯೊಂದಿಗೆ, ಸರ್ಕಾರ ನಿಗದಿಪಡಿಸುವ ದಿನಾಂಕದಂದು ರಾಮನಗರದಲ್ಲಿ ಅಜಾದ್ ಕಿ ಅಮೃತ ಮಹೋತ್ಸವದ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲು ಹಾಗೂ ಸದರಿ ಕಾರ್ಯಕ್ರಮದ ಸಂಪೂರ್ಣ ವೆಚ್ಚವನ್ನು ಸರ್ಕಾರದ ನಿರ್ದೇಶಾನುಸಾರ ಭರಿಸಲು ಸಿಂಡಿಕೇಟ್ ನಿರ್ಣಯಿಸಿತು.

**ಇತರೆ ವಿಷಯಗಳು:**

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ 75ನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ನೂತನವಾಗಿ ನಿರ್ಮಿಸಿರುವ ಧ್ವಜ ಸ್ಥಂಭದಲ್ಲಿ ಖಾದಿ ಭಂಡಾರದಿಂದ ಒಳ್ಳೆಯ ರಾಷ್ಟ್ರಧ್ವಜವನ್ನು ಖರೀದಿಸಲು ಕಾರ್ಯಕ್ರಮವಹಿಸಬೇಕೆಂದರು.

ಶ್ರೀ ವಿದೇಯ ಬೆಳಗೋಡೆ ಶ್ರೀಕಂತ ಅವರು ಮಾತನಾಡಿ 75ನೇ ಸ್ವಾತಂತ್ರ್ಯೋತ್ಸವದ ಸಂಬಂಧ ಒಂದು ಸಭೆಯನ್ನು ಕರೆಯಬೇಕು ಎಂದರು.

ಕುಲಪತಿಗಳು ಉತ್ತರಿಸಿ ಈಗಾಗಲೇ ಸಿಂಡಿಕೇಟ್ ರಚಿಸಿರುವ ಸಮಿತಿಯು ಇದೇ ರೀತಿ ಧ್ವಜ ಸ್ಥಂಭವಿರುವ ಬೇರೆ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ಏರ್ಪಾಡು ಏನು, ರಾಷ್ಟ್ರಧ್ವಜವನ್ನು ರಾಷ್ಟ್ರೀಯ ಹಬ್ಬದ ಸಂದರ್ಭದಲ್ಲಿ ಮಾತ್ರ ಹಾರಿಸಿದರೆ ಸಾಕೇ ಎಂಬುದರ ಬಗ್ಗೆ ಹಾಗೂ 75ನೇ ಸ್ವಾತಂತ್ರ್ಯೋತ್ಸವವನ್ನು ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳುವ ಬಗ್ಗೆ ಒಂದು ವರದಿಯನ್ನು ನೀಡಿದರೆ ನಂತರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಶ್ರೀ ಗೋಪಿನಾಥ್ ರವರು ಮಾತನಾಡಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಹಳೆಯ ವಿದ್ಯಾರ್ಥಿಗಳ ಸಂಘಗಳನ್ನು ಬಲಪಡಿಸಿಕೊಳ್ಳಬೇಕು ಹಾಗೂ ಅವರುಗಳ ಸಹಾಯದಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗ ಅವಕಾಶ ದೊರಕಿಸಿಕೊಡುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದರು. ಪ್ರೊ. ಟಿ.ವಿ. ರಾಜುರವರು ಮಾತನಾಡಿ ವಿಭಾಗಗಳ ದೃಷ್ಟಿ ವಿಶ್ವವಿದ್ಯಾಲಯದ ಗುರಿ ಹಾಗೂ ಧ್ಯೇಯೋದ್ಧೇಶಗಳಿಗೆ ಪರಸ್ಪರ ಸಂಬಂಧ ಹಾಗೂ ಹೊಂದಾಣಿಕೆ ಇರಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಎಲ್ಲಾ ವಿಭಾಗಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಹಿಂದಿನ ವಿದ್ಯಾರ್ಥಿಗಳ ವಿವರಗಳನ್ನು ಪಡೆದು ಹಳೆಯ ವಿದ್ಯಾರ್ಥಿಗಳ ಸಂಘವನ್ನು ಬಲಪಡಿಸಿ, ವಿಶ್ವವಿದ್ಯಾಲಯ ಚಟುವಟಿಕೆಗಳಿಗೆ ಅವರುಗಳು ಶೈಕ್ಷಣಿಕ ಹಾಗೂ ಇತರ ನೆರವನ್ನು ನೀಡುವಂತಾಗಲು ಹಾಗೂ ಹಳೆಯ ವಿದ್ಯಾರ್ಥಿ ಸಂಘಗಳ ಸಭೆಯನ್ನು ಮೂರು ತಿಂಗಳಿಗೊಮ್ಮೆ ಕರೆಯಲು ಸೂಚಿಸಲಾಗುವುದೆಂದು ತಿಳಿಸಿದರು. ಅವರು ಮುಂದುವರೆದು ವಿಶ್ವವಿದ್ಯಾಲಯದ ವಿಭಾಗಗಳ ಅಧ್ಯಕ್ಷರುಗಳಿಗೆ ಅವರ ವಿಭಾಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗಾವಕಾಶ ಒದಗಿಸುವ ದೃಷ್ಟಿಯಿಂದ ಹಳೆಯ ವಿದ್ಯಾರ್ಥಿಗಳೊಂದಿಗೆ ಹೆಚ್ಚಿನ ಸಂಪರ್ಕ ಸಾಧಿಸುವ ನಿಟ್ಟಿನಲ್ಲಿ ಅವಕಾಶವನ್ನು ನೀಡಲು ಹಾಗೂ ಸಲಹೆಗಳನ್ನು ನೀಡಲು ಈ ಕೆಳಕಂಡ ಸಿಂಡಿಕೇಟ್ ಸದಸ್ಯರುಗಳ ಸಮಿತಿಯನ್ನು ಸಿಂಡಿಕೇಟ್ ರಚಿಸಿತು.

1. ಶ್ರೀ ಗೋಪಿನಾಥ – ಅಧ್ಯಕ್ಷರು
2. ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ – ಸದಸ್ಯರು
3. ಪ್ಲೇಸ್ಮೆಂಟ್ ಅಧಿಕಾರಿಗಳು – ಸಂಚಾಲಕರು

ಕುಲಪತಿಗಳು ಮಾತನಾಡಿ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನೀರು ಹಾಗೂ ವಿದ್ಯುತ್ ಸರಬರಾಜು ಸಂಬಂಧಪಟ್ಟಂತೆ ಮತ್ತು ಇತರ ಚಿಕ್ಕಪುಟ್ಟ ರಿಪೇರಿ ಕೆಲಸಗಳಿಗೆ ಆಂತರಿಕವಾಗಿ ಒಂದು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ (in house system). ಅದೇ ವ್ಯವಸ್ಥೆಯನ್ನು ವಿಶ್ವವಿದ್ಯಾಲಯದಲ್ಲೂ ಅಳವಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಚರ್ಚೆಯ ನಂತರ ಜಯದೇವ ಹೃದ್ರೋಗ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡು ಸದರಿ ವಿಷಯದ ಬಗ್ಗೆ ಒಂದು ವರದಿ ಸಲ್ಲಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

1. ಕುಲಸಚಿವರು – ಅಧ್ಯಕ್ಷತೆ
2. ಪ್ರೊ. ಟಿ.ವಿ ರಾಜು – ಸದಸ್ಯರು
3. ಶ್ರೀ ಗೋಪಿನಾಥ – ಸದಸ್ಯರು
4. ಶ್ರೀ ಬಿ.ಟಿ. ಚಂದ್ರಶೇಖರ್ – ಸಂಯೋಜಕರು
   ವಿಶ್ವವಿದ್ಯಾಲಯ ಅಭಿಯಂತರರು

ಈ ಸಮಿತಿಯು ಜುಲೈ–2022 ರ ಅಂತ್ಯದೊಳಗೆ ಮೇಲ್ಕಂಡ ಸಂಸ್ಥೆಗೆ ಭೇಟಿ ನೀಡಿ ವರದಿ ಸಲ್ಲಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

15ನೇ ಆಗಸ್ಟ್ 2022 ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಲು ತಕ್ಷಣ ಕ್ರಮ ಕೈಗೊಳ್ಳಬೇಕಾದ ಕಾರಣ ಈ ಸಂಬಂಧ ರಚಿಸಿರುವ ಸಮಿತಿಯ ಸಭೆಯನ್ನು ಕೂಡಲೇ ಕರೆದು ವರದಿ ಸಲ್ಲಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

ಡಾ. ಹೆಚ್. ಸುಧಾಕರ್ ರವರು ಮಾತನಾಡಿ ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣವನ್ನು ನಿರ್ಮಿಸಲು ಕಾರಣಕರ್ತರಾದ ಡಾ. ಹೆಚ್. ನರಸಿಂಹಯ್ಯ ಅವರ ಹೆಸರನ್ನೊಳಗೊಂಡ ನಾಮಫಲಕವನ್ನು ತೆರವುಗೊಳಿಸಿ ವಿಶ್ವವಿದ್ಯಾಲಯದ ದ್ವಾರದಲ್ಲಿ ಬೇರೆ ನಾಮಫಲಕವನ್ನು ಸಿಂಡಿಕೇಟ್ ಗಮನಕ್ಕೆ ಬಾರದೇ ಅಳವಡಿಸಿರುವ ಕುರಿತು ಆಕ್ಷೇಪ ವ್ಯಕ್ತಪಡಿಸಿ ಕೂಡಲೇ ಹೊಸದಾಗಿ ಹಾಕಿರುವ ನಾಮಫಲಕವನ್ನು ತೆರವುಗೊಳಿಸಬೇಕೆಂದು ಕೋರಿದರು.

ದೀರ್ಘ ಚರ್ಚೆಯ ನಂತರ ಹೊಸದಾಗಿ ಜ್ಞಾನಭಾರತಿ ದ್ವಾರದಲ್ಲಿ ಅಳವಡಿಸಿರುವ ನಾಮಫಲಕವನ್ನು ತೆರವುಗೊಳಿಸಲು ಹಾಗೂ ಮೊದಲಿನಂತೇ ಡಾ. ಹೆಚ್. ನರಸಿಂಹಯ್ಯ ರವರ ಹೆಸರನ್ನೊಳಗೊಂಡ ನಾಮಫಲಕವನ್ನು ಮಾತ್ರ ಅಲ್ಲಿ ಅಳವಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

ಡಾ. ಹೆಚ್. ಸುಧಾಕರ್ ರವರು ತಾವು ಸಿಂಡಿಕೇಟ್ ಉಪಸಮಿತಿಗಳಿಗೆ ಸದಸ್ಯರಾಗಿದ್ದು, ಸದರಿ ಸಮಿತಿಯ ಸಭೆಗಳನ್ನು ಕರೆದಿರುವುದಿಲ್ಲವೆಂದು ತಿಳಿಸಿ ಆ ಸಮಿತಿಗಳ ಸದಸ್ಯತ್ವದಿಂದ ಮುಕ್ತಿಗೊಳಿಸಬೇಕೆಂದು ಪತ್ರವನ್ನು ಸಲ್ಲಿಸಿದರು.

ಕುಲಪತಿಗಳು ಎಲ್ಲಾ ಉಪಸಮಿತಿಗಳು ಪ್ರಸ್ತುತ ಈಗಿರುವ ಹಾಗೆ ಮುಂದುವರೆಯಲಿ, ಮುಂದೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿ ಉಪಸಮಿತಿಗಳ ಸಭೆಗಳನ್ನು ಕೂಡಲೇ ಕರೆಯಲು ಸಂಬಂಧಪಟ್ಟವರಿಗೆ ಒಂದು ಟಿಪ್ಪಣಿ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

26/07/2022

**ಕುಲಪತಿಯವರು.**